ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ ಬಸವನಗುಡಿ ವಿಭಾಗ,
ಬಿಬಿಎಂಪಿ ಕಟ್ಟಡ, ಚೆನ್ನಮ್ಮನಕೆರೆ ಅಚ್ಚುಕಟ್ಟು, ವಿದ್ಯಾಪೀಠ, ಬಿಎಸ್‌ಕೆ 3ನೇ ಹಂತ, ಬೆಂಗಳೂರು-85

ಪೂರ್ವಭಾವಿ ಸಭಾ ನಡವಳಿ.

ಬಸವನಗುಡಿ ವಿಭಾಗ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣಾ ಕೆಲಸ ಕಾರ್ಯಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿ **No. EE(BG)/E-Proc/10/2024-25 ,Date:29.01.2025** ರ ಟೆಂಡರ್‌ಗೆ ಸಂಬಂಧಿಸಿದಂತೆ, ದಿನಾಂಕ: 04.02.2025 ರಂದು ಕಾರ್ಯಪಾಲಕ ಅಭಿಯಂತರರು ಬಸವನಗುಡಿ ವಿಭಾಗರವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದ್ದು ಸದರಿ ಸಭೆಗೆ ಈ ಕೆಳಕಂಡ ಗುತ್ತಿಗೆದಾರರು/ಸಾರ್ವಜನಿಕರು ಹಾಜರಾಗಿದ್ದು, ಸದರಿ ಸಭೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದಂತೆ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಗಿರುತ್ತದೆ.

ಕ್ರ ಸ	ಗುತ್ತಿಗೆದಾರರ ಹೆಸರು/ಏಜನ್ಸಿ ಹೆಸರು	ಮೊಬೈಲ್ ಸಂಖ್ಯೆ
1	ಶ್ರೀಮತಿ ಶೋಭ.ಎಂ.ಎನ್ ಸಹಾಯಕ ಪ್ರಧಾನ ವ್ಯವಸ್ಥಾಪಕರು ಬಸವನಗುಡಿ ವಿಭಾಗ	9591729166
2	ನಾಗರಾಜು.ಎಸ್.ಎನ್ ಹೇಮಂತ್ ಎಂಟರ್‌ಪ್ರೈಸರ್ಸ್	9901029429
3	ರವಿ ಪ್ರಸಾದ್ ಸೂರ್ಯ ಚಂದ್ರ ಎಂಟರ್‌ಪ್ರೈಸರ್ಸ್	9880237535
4	ಪಟ್ಟಾಭಿರಾಮಯ್ಯ ರಾಜರಾಜೇಶ್ವರಿ ಎಂಟರ್‌ಪ್ರೈಸರ್ಸ್	9448090121
5	ಹೆಚ್.ಟಿ ಜಗದೀಶ್	7204448808
6	ರಾಘವೇಂದ್ರ ಧರ್ಮಶಾಸ್ತ್ರ ಎಂಟರ್‌ಪ್ರೈಸರ್ಸ್	7899277763
7	ಕೆ.ಸತೀಶ್ ಕುಮಾರ್ ವಿಶಾಲ್ ವೆಂಚರ್ಸ್	9008394666
8	ಮಂಜು ಸಾಗರ್ ಲವಕುಶ ಟ್ರ್ಯಾನ್ಸ್‌ಪೋರ್ಟ್ಸ್	9986179690
9	ವೆಂಕಟೇಶ್ ಎಸ್‌ಎಲ್‌ವಿ ಎಂಟರ್‌ಪ್ರೈಸರ್ಸ್	9071726666

ಮೊದಲನೆಯದಾಗಿ ಮಾನ್ಯ ಕಾರ್ಯಪಾಲಕ ಅಭಿಯಂತರರು ಪೂರ್ವಭಾವಿ ಸಭೆ ಹಾಜರಿದ್ದಂತಹ ಎಲ್ಲಾ ಗುತ್ತಿಗೆದಾರರಿಗೆ ಸ್ವಾಗತವನ್ನು ಕೋರಿ ಸಭೆಯಲ್ಲಿ ಬಸವನಗುಡಿ ವಿಭಾಗದ ಘನತ್ಯಾಜ್ಯ ನಿರ್ವಹಣೆಗೆ ಸಂಬಂದಿಸಿದಂತೆ ಆಹ್ವಾನಿಸಲಾಗಿರುವ ಟೆಂಡರ್‌ನ ಕುರಿತು ಕೆಲವು ವಿಷಯಗಳ ಬಗ್ಗೆ ಚರ್ಚಿಸಲಾಗಿರುತ್ತದೆ.

1. ಟೆಂಡರ್‌ನ RFP documents ನಲ್ಲಿ Turnover certificate ಗೆ ಸಂಬಂಧಿಸಿದಂತೆ ಘನತ್ಯಾಜ್ಯ ನಿರ್ವಹಣೆ ಬದಲಾಗಿ civil engineering ಎಂದು ಇರುವುದಾಗಿ ಗುತ್ತಿಗೆದಾರರು ತಿಳಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಟೆಂಡರ್‌ನನ್ನು standard tender document ಅನ್ವಯ works ನಲ್ಲಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಸದರಿ RFP documents ನಲ್ಲಿ ಎಲ್ಲೆಲ್ಲಿ ಘನತ್ಯಾಜ್ಯ ನಿರ್ವಹಣೆ ಬದಲಾಗಿ civil engineering ಎಂದು ಇರುವುದನ್ನು ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಎಂದು ಭಾವಿಸಲು/ಪರಿಗಣಿಸಲು ತಿಳಿಸಲಾಯಿತು.

2. ಜಿ.ಎಸ್.ಟಿ ಗೆ ಸಂಬಂಧಿಸಿದಂತೆ ಜಿ.ಎಸ್.ಟಿ ರಿಜಿಸ್ಟ್ರೇಷನ್ ದಾಖಲೆಗಳನ್ನು ನೀಡಲು ಟೆಂಡರ್‌ನಲ್ಲಿ ಕೋರಲಾಗಿರುತ್ತದೆ. ಆದರೆ ಘನತ್ಯಾಜ್ಯ ನಿರ್ವಹಣೆ ಕಾರ್ಯವು Services ಕಾರ್ಯವಾಗಿರುವುದರಿಂದ ಜಿ.ಎಸ್.ಟಿ ವಿನಾಯಿತಿ ಇರುವುದಾಗಿ ಗುತ್ತಿಗೆದಾರರು ಸಭೆಗೆ ಕೋರಿದ್ದು, ಇದರಂತೆ ಜಿ.ಎಸ್.ಟಿ ರಿಜಿಸ್ಟ್ರೇಷನ್ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಗುತ್ತಿಗೆದಾರರು ಟೆಂಡರ್‌ಗೆ ಬಿಡ್ ನಮೂದಿಸುವಾಗ ಜಿ.ಎಸ್.ಟಿ ಹೊರತುಪಡಿಸಿ ದರ ನಮೂದಿಸುವುದು. ಮತ್ತು ಆಗಿಂದಾಗೆ ಪಾಲಿಕೆ/ಬಿಎಸ್‌ಡಬ್ಲ್ಯೂಎಂಎಲ್ ಕಂಪನಿ ಅಥವಾ ಸರ್ಕಾರದ ವತಿಯಿಂದ ಹೊರಡಿಸುವ ಆದೇಶಗಳಿಗೆ ಗುತ್ತಿಗೆದಾರರು ಬದ್ದರಾಗತ್ತಕ್ಕದ್ದು.

3. ಟೆಂಡರ್‌ನ RFP documents ನಲ್ಲಿ 50% ಗುತ್ತಿಗೆದಾರರ ಹೆಸರಿಲ್ಲಿ ಸ್ವಂತ ವಾಹನಗಳು ಇರಬೇಕು ಹಾಗೂ ಉಳಿದ 50% ವಾಹನಗಳು ಲೀಸ್/ಬಾಡಿಗೆ ಆಧಾರದ ಮೇಲೆ ಇರಬೇಕೆಂದು ಇರುತ್ತದೆ. ಆದರೆ ಈ ಹಿಂದೆ ಪಾಲಿಕೆ ವತಿಯಿಂದ ಕರೆದ್ದಂತಹ ಟೆಂಡರನಲ್ಲಿ 50% ಗುತ್ತಿಗೆದಾರರ ಹೆಸರಿಲ್ಲಿ ಸ್ವಂತ ವಾಹನಗಳು ಇರಬೇಕೆಂದು ಎಲ್ಲೂ ಇರಲಿಲ್ಲವೆಂದು ಗುತ್ತಿಗೆದಾರರು ಸಭೆಗೆ ತಿಳಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಾಲಿ ಟೆಂಡರ್‌ನನ್ನು works ನಲ್ಲಿ ಟೆಂಡರ್ ಕರೆದಿರುವುದರಿಂದ standard tender document ನಿಯಮದಂತೆ 50% ಗುತ್ತಿಗೆದಾರರ ಹೆಸರಿಲ್ಲಿ ಸ್ವಂತ ವಾಹನಗಳು ಇರಬೇಕೆಂಬುದು ಹಾಗೂ ಉಳಿದ 50% ವಾಹನವನ್ನು ಬಾಡಿಗೆ/ಲೀಸ್‌ನಲ್ಲಿ ಪಡೆದುಕೊಳ್ಳುವುದು ಕಡ್ಡಾಯವಾಗಿರುವುದಾಗಿ ತಿಳಿಸಲಾಯಿತು.

4. ಆಟೋಟಿಪ್ಪರ್ ಹಾಗೂ ಕಾಂಪ್ಯಾಕ್ಟರ್ ವಾಹನಗಳಿಗೆ ಸಂಬಂಧಿಸಿದಂತೆ ನಿಗಧಿಪಡಿಸಲಾದ ಮೊತ್ತಕ್ಕೆ ಸಂಬಂಧಿಸಿದಂತೆ Price breakup ಇಲ್ಲವೆಂದು ಗುತ್ತಿಗೆದಾರರು ಸಭೆಗೆ ಕೋರಲಾಗಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾಹನಗಳಿಗೆ(ಚಾಲಕರು ಹಾಗೂ ಸಹಾಯಕರು ಒಳಗೊಂಡಂತೆ) ಈ ಹಿಂದೆ ಪಾಲಿಕೆಯ ವತಿಯಿಂದ ನಿಗಧಿಪಡಿಸಲಾದ ಮೊತ್ತವನ್ನು ಹಾಗೂ ಕಾರ್ಮಿಕ ಇಲಾಖೆಯಿಂದ ಆಗಿಂದಾಗೆ ಹೊರಡಿಸಲಾಗುವ ವಿ.ಡಿ.ಎ ಮೊತ್ತವನ್ನು ಒಳಗೊಂಡಂತೆ ದರವನ್ನು ನಿಗಧಿಪಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿ ಮುಖ್ಯ ಅಭಿಯಂತರರು ದಕ್ಷಿಣ ವಲಯರವರಿಂದ ಅನುಮೋದನೆ ಪಡೆದು ಕ್ರಮವಹಿಸಲಾಗಿರುತ್ತದೆ.

5. ಟೆಂಡರ್‌ನನ್ನು ಎಷ್ಟು ಮಾಹೆಗಳ ಅವಧಿಗೆ ನಿಗಧಿಪಡಿಸಿ ಅನುಮೋದನೆಯಾಗಿರುವ ಬಗ್ಗೆ ಗುತ್ತಿಗೆದಾರರು ಕೋರಲಾಗಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಗುತ್ತಿಗೆಯ ಅವಧಿ 02 ತಿಂಗಳುಗಳು ಮಾಹೆಗೆ ಅವಧಿಗೆ ಅನುಮೋದನೆಯನ್ನು ಪಡೆದುಕೊಂಡು ಟೆಂಡರ್ ಆಹ್ವಾನಿಸಲಾಗಿರುತ್ತದೆ ಎಂದು ತಿಳಿಸಲಾಯಿತು.

ಕೊನೆಯದಾಗಿ ಸಭೆಗೆ ಹಾಜರಿದ್ದಂತಹ ಎಲ್ಲಾ ಅಧಿಕಾರಿ ಹಾಗೂ ಗುತ್ತಿಗೆದಾರರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಪ್ರಧಾನ ವ್ಯವಸ್ಥಾಪಕರು
ಘತ್ಯಾನಿ, ಬಸವನಗುಡಿ ವಿಭಾಗ
ಬಿಎಸ್‌ಡಬ್ಲ್ಯೂಎಂಎಲ್

ಕಾರ್ಯಪಾಲಕ ಅಭಿಯಂತರರು
ಬಸವನಗುಡಿ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ